IndiaAlliance
DBT wellcome
www.indiaalliance.org

# ಕೇಳಿರಿ, ಈ ಬಾವಲಿಯ ಮಾತನ್ನು



ನಾನು ಬೇಹೂ. ಹಣ್ಣುಗಳನ್ನು ತಿಂದು ಜೀವಿಸೋ ಬಾವಲಿ

ಕೋವಿಡ್-19ರ ಪ್ರಸರಣಕ್ಕೆ ನಾನೇ ಕಾರಣವೆಂಬ ಗಾಳಿಸುದ್ದಿಗಳು ಹರಡಿವೆ. ಅವುಗಳಿಗೆ ವಿವರಣೆ ಸಲ್ಲಿಸಲು ಬಂದಿರುವೆ.

**20%** ಸಸ್ತನಿಗಳು ಬಾವಲಿಗಳು.
ಪ್ರಪಂಚದಲ್ಲಿ **1411** ಪ್ರಭೇದದ ವಿವಿಧ ಬಾವಲಿಗಳಿವೆ.
ಭಾರತದಲ್ಲಿ **128** ಪ್ರಭೇದದ ಬಾವಲಿಗಳಿವೆ.




## ನನ್ನ ಬಗ್ಗೆ ಸಂಕ್ಷಿಪ್ತ ಮಾಹಿತಿ

- ನಾನು ಹಕ್ಕಿಯಲ್ಲ, ಸಸ್ತನಿಗಳಲ್ಲಿ ಹಾರಬಲ್ಲ ಏಕಮಾತ್ರ ಜೀವಿ.



- ನನ್ನ ಸಂತಾನೋತ್ಪತ್ತಿ ಹೆಚ್ಚಿಲ್ಲ. ವರ್ಷಕ್ಕೆ ಎರಡೇ ಮರಿಗಳನ್ನು ಹಾಕುತ್ತೇನೆ.
- ರಾತ್ರಿಯಲ್ಲಿ ನಾನು ಶಬ್ದತರಂಗಗಳ ಮೂಲಕ ನನ್ನ ದಾರಿಯನ್ನು ಕಂಡುಕೊಳ್ಳುತ್ತೇನೆ ಹಾಗೂ ಬೇಟೆಯನ್ನು ಹುಡುಕುತ್ತೇನೆ.
- ನಾನು ಸಾಮಾನ್ಯವಾಗಿ ಮನುಷ್ಯರ ಮೇಲೆ ದಾಳಿ ಮಾಡುವುದಿಲ್ಲ.
- ಹಾಗೊಂದು ವೇಳೆ ನನ್ನನ್ನು ರಕ್ಷಿಸಿಕೊಳ್ಳಲು ನಿಮ್ಮನ್ನೇನಾದರೂ ಕಚ್ಚಿದರೆ ನೀವು ನಾಯಿ ಕಚ್ಚಿದಾಗ ತೆಗೆದುಕೊಳ್ಳುವ ಲಸಿಕೆಯನ್ನು ಚುಚ್ಚಿಸಿಕೊಳ್ಳಿ, ಅಷ್ಟೇ.

## ನಾನೊಬ್ಬ ನಾಯಕ-ಖಳನಾಯಕನಲ್ಲ

ನಾವು ಹಣ್ಣುಗಳನ್ನು ತಿಂದು ಹೂವುಗಳಲ್ಲಿರುವ ಮಕರಂದವನ್ನು ಹೀರಿ ಹುಳುಹುಪ್ಪಟೆಗಳನ್ನು ತಿಂದು ಪರಾಗಸ್ಪರ್ಶ, ಬೀಜ ಪ್ರಸರಣ, ಹಾಗೂ ಕೀಟನಾಶಕ ಕ್ರಿಯೆಯಲ್ಲಿ ಸಹಕರಿಸುತ್ತೇವೆ.



ಹುಳಹುಪ್ಪಟೆಗಳನ್ನು ತಿನ್ನುವ ನನ್ನ ಕೆಲವು ಬಂಧುಗಳು ಒಂದೇ ರಾತ್ರಿಯಲ್ಲಿ ಸುಮಾರು 1000 ದಷ್ಟು ಸೊಳ್ಳೆಗಳನ್ನು ತಿಂದು ನಿಮ್ಮನ್ನು ಅವುಗಳಿಂದ ಹರಡುವ ರೋಗಗಳಿಂದ ರಕ್ಷಿಸುತ್ತವೆ.

## ನನ್ನ ಸತ್ವಶಾಲಿ ಹಿಕ್ಕೆ

- ನನ್ನ ಹಿಕ್ಕೆ ಒಂದು ಅತ್ಯುತ್ತಮ ನೈಸರ್ಗಿಕ ಗೊಬ್ಬರ.
- ಸೂರ್ಯನ ಬೆಳಕೇ ಕಾಣದ ಗುಹೆಗಳು ಮತ್ತು ಪರಂಪರೆಯ ತಾಣಗಳಲ್ಲಿ ಅಡಗಿರುವ ಅನೇಕ ಜೀವಿಗಳಿಗೆ ನನ್ನ ಹಿಕ್ಕೆಯೇ ಜೀವನಾಧಾರ.



- ಸುತ್ತಲೂ ಬಿದ್ದಿರುವ ನನ್ನ ಹಿಕ್ಕೆಯಿಂದ ಯಾವುದೇ ತೀವ್ರ ತರಹದ ಖಾಯಿಲೆಗಳು ಬಾರದಿದ್ದರೂ, ಅವುಗಳ ನೇರ ಸಂಪರ್ಕಕ್ಕೆ ಒಳಗಾದರೆ ಪ್ರಾಯಶಃ ಸೋಂಕಿನಿಂದ ಉರಿ ಊತ ಉಂಟಾಗಬಹುದು. ಕೈಗಳಿಗೆ ಗ್ಲೌಸ್ ಹಾಕಿಕೊಳ್ಳುವುದು ಹಾಗೂ ಮೂತಿಗೆ ಮಾಸ್ಕ್ ಧರಿಸುವುದು – ಯಾವುದೇ ಮಲವನ್ನು ಮುಟ್ಟುವಾಗ ಅನುಸರಿಸುವ ಈ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಿರಿ. ಸ್ವಚ್ಛತೆಗೆ ಮೊದಲ ಆದ್ಯತೆ, ಅಲ್ಲವೇಗೆಳೆಯ?

## ನನ್ನ ಉನ್ನತ ರೋಗ ನಿರೋಧಕ ಶಕ್ತಿ



- ನನ್ನಲ್ಲಿ ಅದ್ಭುತ ರೋಗ ನಿರೋಧಕ ಶಕ್ತಿ ಇದೆ. ವೈರಾಣುಗಳು ನನ್ನಲ್ಲಿ ಜೀವಿಸಬಹುದು ಆದರೆ ಅವುಗಳಿಂದ ನನಗ್ಯಾವ ಅನಾರೋಗ್ಯವೂ ಆಗುವುದಿಲ್ಲ.
- ಸಾಮಾನ್ಯವಾಗಿ ಈ ವೈರಾಣುಗಳು ನಮ್ಮಲ್ಲಿಯೇ ಇರುವವು (ಯಾರಿಗೂ ನಾವಾಗಿ ಹರಡುವುದಿಲ್ಲ) ಆದರೆ ಮಾನವನೇನಾದರೂ ನಮ್ಮ ವಾಸಸ್ಥಳಗಳನ್ನು ನಾಶಮಾಡಿ ಹೊರಟಾಗ ಈ ವೈರಾಣುಗಳ ಸಂಪರ್ಕಕ್ಕೆ ಬರಬಹುದು.
- ನನ್ನೊಳಗಿರುವ ವೈರಾಣುಗಳಿಗೆ ಮತ್ತು ಹೊಸ ಕೊರೊನಾ ವೈರಾಣುಗಳಿಗು ಸಂಬಂಧವಿರಬಹುದೇನೊ, ಆದರೆ ಅವು ನನ್ನಿಂದ ನೇರವಾಗಿ ಎಲ್ಲೂ ಹರಡಿಲ್ಲ.
- ನನ್ನಲ್ಲಿರುವ ಈ ಅದ್ಬುತ ರೋಗನಿರೋಧಕ ಶಕ್ತಿಯನ್ನು ಮಾನವರಲ್ಲೂ ಬೆಳೆಸಲು ವಿಜ್ಞಾನಿಗಳು ಪ್ರಯತ್ನಿಸುತ್ತಿದ್ದಾರೆಂದು ಕೇಳಿದ್ದೇನೆ.



- ನನ್ನನ್ನು ಕೊಲ್ಲುವುದರಿಂದ ಕೊರೊನಾ ಆಗಲೀ ಅಥವಾ ಇನ್ಯಾವ ಮಾರಿಯನ್ನಾಗಲೀ ತಡೆಯಲು ಸಾಧ್ಯವಿಲ್ಲ. ಇದರಿಂದ ನೀವು ಪರಿಸರದ ಸಮತೋಲನವನ್ನು ಕೆಡಿಸಿ ಪ್ರಾಣಿಜನ್ಯವಾದ ಹಲವಾರು ಖಾಯಿಲೆಗಳಿಗೆ ದಾರಿ ಮಾಡಿ ಕೊಟ್ಟಂತಾಗುತ್ತದೆ, ಅಷ್ಟೇ.
- ನಾನು ಬದುಕಿದ್ದರೆ, ಮೇಲೆ ಹೇಳಿದಂತೆ ಈ ಭೂಗ್ರಹವನ್ನು ಉತ್ತಮವಾಗಿಸಲು ಸಹಾಯ ಮಾಡಬಲ್ಲೆ.
- 'ಬಾವಲಿ ಮನುಷ್ಯ' (ಬ್ಯಾಟ್ ಮ್ಯಾನ್) ನನ್ನ ಅದ್ಬುತ ಶಕ್ತಿಯ ಆಧಾರದ ಮೇಲಿನ ಒಂದು ಕಾಲ್ಪನಿಕ ಪಾತ್ರವಷ್ಟೇ. ನಾನೇ ನಿಜವಾದ ಅದ್ಬುತ ಜೀವಿ.



Designed & Illustrated by Richa Kedia www.richakedia.com

ಅನವಶ್ಯಕವಾಗಿ ನಮ್ಮನ್ನು ಕಾಡುವ ಬದಲು **www.who.int** ಮತ್ತು **www.mohfw.gov.in** ಮಾರ್ಗಸೂಚಿಗಳನ್ನು ಅನುಸರಿಸಿ ಕೋವಿಡ್-19 ರಿಂದ ನಿಮ್ಮನ್ನು ರಕ್ಷಿಸಿಕೊಳ್ಳಿ.

ಅನುವಾದ: ರಾಜು ಮುತ್ತುಸಾಗರ ಮತ್ತು ಲಾವಣ್ಯ ಮಂಜುನಾಥ